ಸಿ.ಎನ್. ಮುಕ್ತಾ

ಕಲೆ: ಗಣೇಶ ಆಚಾರ್ಯ

# ಮಗುವಿನ ಆಯ್ಕೆ

ಒಂದಾನೊಂದು ಕಾಲದಲ್ಲಿ ಒಂದು ಗ್ರಾಮದಲ್ಲಿ ಗಂಡಹೆಂಡತಿ ತಮ್ಮ ಐದು ವರ್ಷದ ಮಗಳೊಂದಿಗೆ ವಾಸಮಾಡುತ್ತಿದ್ದರು. ಗಂಡ ಕಾಡಿಗೆ ಹೋಗಿ ಸೌದೆ ತಂದು ವ್ಯಾಪಾರ ಮಾಡುತ್ತಿದ್ದ. ಹೆಂಡತಿ ಮನೆಯ ಮುಂದೆ ಕೈತೋಟ ಮಾಡಿ ಹೂವು–ತರಕಾರಿಗಳನ್ನು ಮಾರಿ ಜೀವನ ನಿರ್ವಹಣೆಗೆ ಸಹಾಯ ಮಾಡುತ್ತಿದ್ದಳು. ಅವರದು ಅತ್ಯಂತ ಶ್ರೀಮಂತಿಕೆಯ ಜೀವನವಲ್ಲದಿದ್ದರೂ ನೆಮ್ಮದಿಯ ಜೀವನವಾಗಿತ್ತು.

ಇಬ್ಬರಿಗೂ ಮಗಳೆಂದರೆ ಪಂಚಪ್ರಾಣ. ಅವಳನ್ನು ಶಾಲೆಗೆ ಕಳುಹಿಸುತ್ತಿದ್ದರು.

ಗಂಡ ಹೆಂಡತಿ ಇಬ್ಬರೂ ಶ್ರಮಜೀವಿಗಳು. ಕಪಟ, ಮೋಸ ಅವರಿಗೆ ಗೊತ್ತಿರಲಿಲ್ಲ.

